ಶ್ರೀ ಕೆ. ಹೆಚ್. ಪಾಟೀಲ್.—ಇವತ್ತು ರಾಜ್ಯದಲ್ಲಿನ ನಿರುದ್ಯೋಗದ ಸಂಖ್ಯೆ ಇಷ್ಟೇ ಅಲ್ಲ. ಇದನ್ನು ಮಾತ್ರ ಗಣನೆಗೆ ತೆಗೆದುಕೊಂಡರೆ ಶೇಕಡಾ ೩ರಷ್ಟು ಮಾತ್ರ ನಿರುದ್ಯೋಗದ ಸಂಖ್ಯೆ ಆಗುತ್ತದೆ. ಇವತ್ತು ನಿಜವಾದ ನಿರುದ್ಯೋಗದ ಸಂಖ್ಯೆ ಇನ್ನೂ ಹೆಚ್ಚು ಇದೆ. ಇವತ್ತು ಬೇರೆ ಬೇರೆ ಉದ್ದಿಮೆದಾರರು ನಮಗೆ ಇಂತಿಂತಹ ಪ್ರಿಪ್ಯಾರ್ಡ್‌ನೆಸ್‌ಯುಳ್ಳವರು ಬೇಕು ಎಂದಾಗ ಇವರ ಲಿಸ್ಟ್‌ನ್ನು ಅಲ್ಲಿಗೆ ಕಳುಹಿಸಿಕೊಡಲಾಗುತ್ತದೆ. ಆದರೆ ನೌಕರಿ ಕೊಡುವ ಕೆಲಸ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್‌ದ್ದು ಅಲ್ಲ. ಆದರೂ ನಾವು ಈ ಬಗ್ಗೆ ಆಲೋಚನೆ ಮಾಡುತ್ತಿದ್ದೇವೆ. ನಿರುದ್ಯೋಗ ನಿವಾರಣೆ ದೃಷ್ಟಿಯಿಂದ ವಿನಿಮಯ ಕೇಂದ್ರಗಳಿಂದ ಡೈರೆಕ್ಟಾಗಿ ನೌಕರಿ ಒದಗಿಸುವುದಕ್ಕೆ ಸಹಾಯ ಮಾಡುವುದಕ್ಕೆ ಸಾಧ್ಯವೇ ಎಂದು ಯೋಚನೆ ಮಾಡುತ್ತಿದ್ದೇವೆ. ಇದಕ್ಕೆ ನಮ್ಮ ಪಬ್ಲಿಕ್ ಸೆಕ್ಟಾರ್ ಇಂಡಸ್ಟ್ರಿಸ್ ಹೊಂದಾಣಿಕೆ ಆಗಬೇಕಾಗುತ್ತದೆ. ಅದನ್ನೆಲ್ಲಾ ನೋಡಿಕೊಂಡು ನಾವು ಮಾಡಬೇಕಾಗುತ್ತದೆ. ಮತ್ತೆ ಈ ಯುವಕರ ನಿರುದ್ಯೋಗ ಸಮಸ್ಯೆಯನ್ನು ಯಾವಾಗ ಬಗೆಹರಿಸುತ್ತೀರಿ ಎಂದು ಹೇಳಿದ್ದಾರೆ. ಇದನ್ನು ಪರಿಹರಿಸಬೇಕಾದರೆ, ಬರೀ ನೌಕರಿ ಒಂದರಿಂದಲೇ ಮಾಡುವುದಕ್ಕಾಗುವುದಿಲ್ಲ. ಇವತ್ತು ಎಷ್ಟು ನೌಕರಿ ಹುದ್ದೆಗಳು ತಯಾರು ಆಗುತ್ತವೆಯೋ ಅದಕ್ಕೆ ನಾಲ್ಕು ಪಟ್ಟು ಮಂಕ್ಕಳನ್ನು ಹಡೆಯುವ ಶಕ್ತಿಯನ್ನು ನಮ್ಮ ದೇಶ ಪಡೆದುಕೊಂಡಿದೆ. ಇವತ್ತು ಯಾವುದಾದರೂ ಉದ್ಯಮವನ್ನು ಪ್ರಾರಂಭ ಮಾಡಿ ಆ ಉದ್ಯಮದ ಮುಖಾಂತರ ನಿರುದ್ಯೋಗವನ್ನು ಹೋಗಲಾಡಿಸಬೇಕೇ ವಿನಃ ಉಳಿದ ಮಾರ್ಗದಿಂದ ಹೋಗುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎ. ಕೆ. ಆನಂತಕೃಷ್ಣ.—ಇವತ್ತು ಉದ್ಯೋಗ ವಿನಿಮಯ ಕೇಂದ್ರದಿಂದ ಏನು ಉದ್ದಿಮೆಗಳಿಗೆ ಹೆಸರನ್ನು ಕಳುಹಿಸುತ್ತೀರಿ. ಅಂತಹವರಿಗೆ ಸೂಕ್ತ ಕೆಲಸ ಸಿಕ್ಕಿದೆಯೋ ಅಥವಾ ಸಿಗಲಿಲ್ಲವೇ, ಎನ್ನುವ ಬಗ್ಗೆ ಉಸ್ತುವಾರಿ ಇದೆಯೇ ? ಒಂದು ವೇಳೆ ಕೆಲಸ ಕೊಟ್ಟಿಲ್ಲವೆಂದರೆ ಯಾವ ಕಾರಣದಿಂದ ಕೈಬಿಡಲಾಗಿದೆ ಎಂದು ಕೇಳಬೇಕಾಗುತ್ತದೆ. ಈ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಳ್ಳುತ್ತೀರಿ ?

ಶ್ರೀ ಕೆ. ಹೆಚ್ ಪಾಟೀಲ್.—ಈಗ ನಾವು ಅದನ್ನು ಮಾಡುವುದಕ್ಕೆ ಹೆಚ್ಚಿದ್ದೇವೆ. ಯಾರಿಗೆ ಉದ್ಯೋಗ ಕೊಟ್ಟಿದ್ದಾರೆ ಅಥವಾ ಕೊಟ್ಟಿಲ್ಲ ಎನ್ನುವ ಬಗ್ಗೆ ಸ್ಟೇಟ್‌ಮೆಂಟ್ ಕಳುಹಿಸಬೇಕೆಂದು ನಿಯಮ ಇದೆ. ಅನೇಕ ಸಂದರ್ಭದಲ್ಲಿ ಉದ್ದಿಮೆದಾರರು ಅದನ್ನು ಕಳುಹಿಸುತ್ತಾರೆ. ಅದನ್ನೆ ಕೆಲವರು ಕಳುಹಿಸುವುದಿಲ್ಲ. ಈ ಬಗ್ಗೆ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್ ಆಫೀಸರ್ ಮೂಲಕ ನಿರ್ದಿಷ್ಟವಾದ ಆದೇಶವನ್ನು ಕೊಡಿಸುತ್ತೇನೆ. ಯಾರು ಯಾರಿಗೆ ಅಪಾಯಿಂಟ್ ಮಾಡಿದ್ದಾರೆ, ಯಾರಿಗೆ ಮಾಡಿಲ್ಲ, ಮಾಡಿದ್ದಿನ್ನರೆ, ಅದಕ್ಕೆ ಕಾರಣ ಏನು, ಎಂದು ನೋಡಿಕೊಂಡು ಪರಿಶೀಲನೆ ಮಾಡಬೇಕೆಂದು ನಾನು ಆದೇಶ ಕೊಡುತ್ತೇನೆ.

ಶ್ರೀ ಎ. ಕೆ. ಆನಂತಕೃಷ್ಣ.—ಮಾನ್ಯ ಉಪಾಧ್ಯಕ್ಷರೇ ಯವರೆ, ನನ್ನ ಸ್ವಂತ ಅನುಭವದಲ್ಲಿ ಹೇಳುವುದಾದರೆ, ಸಾರ್ವಜನಿಕ ಉದ್ದಿಮೆಗಳಿಗೆ ಅಲ್ಪಸಂಖ್ಯಾತರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭ್ಯರ್ಥಿಗಳ ಪಟ್ಟಿಯನ್ನು ಉದ್ಯೋಗ ವಿನಿಮಯ ಅಧಿಕಾರಿಯವರು ಏನು ಕಳುಹಿಸಿ ಕೊಡುತ್ತಾರೆ, ಆ ಅಭ್ಯರ್ಥಿಗಳಿಗೆ ಉಪಯುಕ್ತವಾದ ಮತ್ತು ಅನುಕೂಲವಾದ ಅವಶ್ಯವಿರುವ ತರಬೇತಾದ ಅಭ್ಯರ್ಥಿಗಳು ಇದರಲ್ಲಿ ಇಲ್ಲವೆಂದು ವಾಪಸ್ಸು ಕಳುಹಿಸುತ್ತಾರೆ. ಅಲ್ಪಸಂಖ್ಯಾತರು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟವರ್ಗಗಳ ಅಭ್ಯರ್ಥಿಗಳನ್ನು ಈ ತರಹ ಕಾರಣಗಳನ್ನು ಹೇಳಿ ಕೊಂಡು ಕೈಬಿಡುತ್ತಾರೆ. ಈ ವಿಚಾರ ಮಾನ್ಯಮಂತ್ರಿಗಳ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಸದಸ್ಯರು ಹೇಳುವುದು ನಿಜ. ಆ ವಿಚಾರ ನನ್ನ ಗಮನಕ್ಕೂ ಬಂದಿದೆ. ಆ ಬಗ್ಗೆ ನಾನು ವಿಚಾರಣೆ ಮಾಡುತ್ತೇನೆ.

ಕಪಿಲಾ ನದಿಯ ಸ್ನಾನ ಘಟ್ಟವನ್ನು ಶುದ್ಧಗೊಳಿಸುವುದು

೫೧೨ (೧೫೫೮) ಶ್ರೀ ಎಂ. ಮಹದೇವ (ನಂಜನಗೂಡು).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಆ) ಕಪಿಲಾ ನದಿಯ ದಡವಲ್ಲಿರುವ ಸ್ನಾನ ಘಟ್ಟದಲ್ಲಿ ಸಾವಿರಾರು ಭಕ್ತಾದಿಗಳು ಸ್ನಾನ ಮಾಡುವ ಸ್ಥಳದಲ್ಲಿ ಜೊಂಡು ಬೆಳೆದು ಅಶುದ್ಧವಾದ ಹಾಗೂ ದುರ್ವಾಸನೆಯಿಂದ ಕೂಡಿದ ನಿಂತ ನೀರಿನಲ್ಲಿ ಸ್ನಾನ ಮಾಡಿ ಆರೋಗ್ಯಕ್ಕೆ ಧಕ್ಕೆಯಾಗಿರುವುದರ ಜೊತೆಗೆ ಪ್ರಾಣ ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

೨ ಸ್ನಾನ ಘಟ್ಟದಲ್ಲಿ ಬೆಳೆದಿರುವ ಜೊಂಡನ್ನು ತೆಗೆಯಿಸಿ, ಹೊಳೆ ನೀರು ಹರಿಯುವ ಹಾಗೆ ಆಳ ಮಾಡಿ ಸಾರ್ವಜನಿಕರಿಗೆ ಅನುಕೂಲ ಮಾಡಲು ಸರ್ಕಾರದ ಯೋಜನೆ ರೂಪಿಸಿದೆಯೇ ?

೩) ಹಾಗಿಲ್ಲದಿದ್ದಲ್ಲಿ ವಿಳಂಬಕ್ಕೆ ಕಾರಣಗಳೇನು ?

೪) ಈ ಯೋಜನೆಗೆ ಶ್ರೀ ಕಂಠೇಶ್ವರಸ್ವಾಮಿ ದೇವಸ್ಥಾನದ ಧರ್ಮದರ್ಶಿಗಳ ಸಮಿತಿ ಹಣ ಸಹಾಯ ಮಾಡಲು ಮುಂದೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಸಚಿವರು).—

೨) ಸ್ನಾನ ಘಟ್ಟದಲ್ಲಿ ಜೊಂಡು ಬೆಳೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆ ನೀರು ಅಷ್ಟು ಪರಿಶುದ್ಧವಾಗಿರುವುದಿಲ್ಲ. ಆದರೆ ಅದು ಮಲೀನವಾಗಿರುವುದಿಲ್ಲ. ಹಾಗೂ ಈ ಜೊಂಡು ಬೆಳೆದಿರುವುದರಿಂದ ಮತ್ತು ಹೂಳನ್ನು ತೆಗೆಸದಿರುವುದರಿಂದ ಪ್ರಾಣ ಹಾನಿಯಾಗಿರುವ ಬಗ್ಗೆ ಯಾವುದೇ ವರದಿಯು ಈವರೆವಿಗೂ ಬಂದಿರುವುದಿಲ್ಲ.

೩) ಹೌದು.

೪) ಉದ್ಭವಿಸುವುದಿಲ್ಲ.

೫) ಹೌದು. ಈ ಕೆಲಸಕ್ಕಾಗಿ ಲೋಕೋಪಯೋಗಿ ಇಲಾಖೆಯವರು ತಯಾರಿಸಿರುವ ಅಂದಾಜು ಪಟ್ಟಿ ಹಾಗೂ ನಕಾಶೆಗಳಿಗೆ ಅನುಗುಣವಾಗಿ ರೂ. ೨,೮೫,೫೦೦–೦೦ ಗಳನ್ನು ದೇವಸ್ಥಾನದ ನಿಧಿಯಿಂದ ಭರಿಸಲು ದೇವಸ್ಥಾನದ ಸಮಿತಿಯವರು ತೀರ್ಮಾನಿಸಿರುತ್ತಾರೆ. ಇದಕ್ಕೆ ಆಡಳಿತಾತ್ಮಕ ಅನುಮೋದನೆ ಯನ್ನು ಸಹ ಈಗಾಗಲೆ ನೀಡಲಾಗಿರುತ್ತದೆ.

ಶ್ರೀ ಎಂ. ಮಹದೇವ್. ಮಾನ್ಯ ಉಪಾಧ್ಯಕ್ಷಣೀಯವರೆ, ನಂಜನಗೂಡು ದಕ್ಷಿಣಕಾಶಿ ಎಂದು ಹೆಸರು ಪಡೆದಿದೆ. ದೇವರ ದರ್ಶನಕ್ಕೆ ದೇಶದ ಎಲ್ಲಾ ಭಾಗಗಳಿಂದ ಭಕ್ತಾದಿಗಳು ಬರುತ್ತಾರೆ. ಅವರು ದೇವರ ಆಶೀರ್ವಾದ ಪಡೆದು ಹೋಗಲಿಕ್ಕೆ ಎಲ್ಲ ಕಡೆಗಳಿಂದ ಭಕ್ತರುಗಳು ಬರುತ್ತಾರೆ. ಕಪಿಲಾನದಿಯ ಸ್ನಾನಘಟ್ಟವನ್ನು ಸರಿಪಡಿಸದೇ ಇರುವುದರಿಂದ ಹಲವಾರು ಜನರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಆದ್ದರಿಂದ ಸ್ನಾನಘಟ್ಟವನ್ನು ರಿಪೇರಿ ಮಾಡಿಸಬೇಕು. ಅಲ್ಲಿ ಜೊಂಡು ಬೆಳೆದು ನೀರು ನಿಂತುಕೊಂಡಿದೆ. ನೀರು ಅಶುದ್ಧವಾಗಿರುವುದರಿಂದ ಆರೋಗ್ಯಕ್ಕೆ ಹಾನಿಕಾರಕವಾಗಿದೆ. ಅಲ್ಲಿ ಸ್ನಾನ ಮಾಡಲಿಕ್ಕೆ ಹೋದವರ ಕಾಲಿಗೆ ಜೊಂಡು ಸುತ್ತುಕೊಂಡು ಪ್ರಾಣಗಳನ್ನು ಕಳೆದುಕೊಳ್ಳುತ್ತಿದ್ದಾರೆ. ಸ್ನಾನಘಟ್ಟದಲ್ಲಿ ಬೆಳೆದಿರುವ ಜೊಂಡನ್ನು ತೆಗೆಯಿಸಬೇಕು. ಪ್ರಾಣ ಹಾನಿಯಾಗಿರುವ ಬಗ್ಗೆ ಯಾವುದೇ ವರದಿಯು ಈವರೆವಿಗೂ ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಹೇಳುತ್ತಿದ್ದಾರೆ. ನಾನು ನಿನ್ನೆ ಅಸೆಂಬ್ಲಿಯನ್ನು ಮುಗಿಸಿಕೊಂಡು ಹೋದಾಗ ಮೂರು ಜನ ಆ ಜೊಂಡು ಕಾಲಿಗೆ ಸುತ್ತಿಕೊಂಡು ಪ್ರಾಣ ಕಳೆದುಕೊಂಡಿದ್ದಾರೆ. ಅವರನ್ನು ಎಳೆದುಕೊಳ್ಳುವುದಕ್ಕೆ ಹೋದವರು ಸಹ ಪ್ರಾಣ ಕಳೆದುಕೊಳ್ಳುವ ಹಾಗೆ ಅಲ್ಲಿನ ಪರಿಸ್ಥಿತಿ ಇದೆ. ಸರ್ಕಾರದವರು ಬೇಗ ಸ್ನಾನದ ಘಟ್ಟವನ್ನು ರಿಪೇರಿ ಮಾಡಿಸಿ ಜೊಂಡನ್ನು ತೆಗೆಸ ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಉಪಾಧ್ಯಕ್ಷಣೀಯವರೆ, ಈ ಉತ್ತರ ಕಾಶಿಯಲ್ಲಿ ಗಂಗಾ ನದಿಯನ್ನು ಶುದ್ಧಗೊಳಿಸಬೇಕೆಂದು ಹೇಳಿ ಅಂದಿನ ಪ್ರಧಾನಮಂತ್ರಿಗಳು ಹೇರಳವಾದ ಹಣವನ್ನು ಮಂಜೂರು ಮಾಡಿದ್ದಾರೆ. ಇವತ್ತು ದಕ್ಷಿಣಕಾಶಿಯನ್ನು ಶುದ್ಧಗೊಳಿಸಲಿಕ್ಕೆ ಮೈಸೂರಿನವರೇ ಆದ ಆರ್ಥಿಕ ಸಚಿವರು ಹೇರಳ ಹಣ ಸಹಾಯ ಮಾಡಬೇಕು. ನಮ್ಮಲ್ಲಿರುವ ಆರ್ಥಿಕ ಪರಿಸ್ಥಿತಿಯಲ್ಲಿ ನಾವೇನು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ದೇವಸ್ಥಾನದ ನಿಧಿಯಿಂದ ಕೊಡತಕ್ಕ ಹಣ ಸಾಲುವುದಿಲ್ಲ. ಆದರ ಬಗ್ಗೆ ಪರಿಶೀಲನೆ ಮಾಡಿ, ಆರ್ಥಿಕ ಸಚಿವರು ಕೂಡ ನಮಗೆ ಸಹಾಯ ಮಾಡಬೇಕು. ಈಗಾಗಲೆ ನಾವು ಒಂದು ಯೋಗ್ಯವಾದ ಕ್ರಮವನ್ನು ಹಾಕಿಕೊಂಡಿದ್ದೇವೆ. ಗುಡಿಗಳೆಲ್ಲ ನಿರ್ಮಲವಾಗಿರ ಬೇಕೆನ್ನುವ ಅಭಿಪ್ರಾಯವನ್ನು ನಾನು ಈಗಾಗಲೇ ವ್ಯಕ್ತ ಮಾಡಿದ್ದೇನೆ. ಎಲ್ಲಾ ಕಡೆಗೂ ಗುಡಿಗಳು ಮಲಿನ ಮತ್ತು ಶಿಥಿಲವಾಗಿವೆ. ದೇವಾಲಯಗಳ ಪ್ರದೇಶಗಳು ನಿರ್ಮಲವಾಗಿರಬೇಕು, ಸ್ವಚ್ಛ ವಾಗಿರಬೇಕು, ಜನರಿಗೆ ಆಕರ್ಷಣೀಯವಾಗಿರಬೇಕು, ಆದ್ದರಿಂದ ಇಂತಹ ಮಲೀನವಾದ ಪ್ರದೇಶ ಗಳನ್ನು ನಿರ್ಮಲಗೊಳಿಸುವುದಕ್ಕೆ ತೀವ್ರಗತಿಯಲ್ಲಿ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ವಾಟಾಳ್‌ನಾಗರಾಜ್.—ಮಾನ್ಯ ಉಪಾಧ್ಯಕ್ಷಣೀಯವರೆ, ಇದರ ಬಗ್ಗೆ ಒಂದು ಪ್ರಶ್ನೆ ಕೇಳುತ್ತೇನೆ.

ಉಪಾಧ್ಯಕ್ಷರು.—ಇಲ್ಲ.